## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಎಸ್. ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 602 |
| ಉತ್ತರಿಸುವ ಸಚಿವರು | : | ಮಾನ್ಯ ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 21-02-2023. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿರುವ ನೊಂದಾಯಿತ ನೇಕಾರರ ಸಂಖ್ಯೆ ಎಷ್ಟು; "ನೇಕಾರ ಸಮ್ಮಾನ್" ಯೋಜನೆಯಡಿ ಇದುವರೆಗೂ ಎಷ್ಟು ಜನ ವಿದ್ಯುತ್ ಮಗ್ಗ ನೇಕಾರರು ಹಾಗೂ ಕಾರ್ಮಿಕರಿಗೆ ಸಹಾಯಧನವನ್ನು ಬಿಡುಗಡೆ ಮಾಡಲಾಗಿದೆ; ಇವರಿಗೆ ಬಿಡುಗಡೆ ಮಾಡಿರುವ ಸಹಾಯಧನವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿರುವ ಒಟ್ಟು 1,57,203 ನೊಂದಾಯಿತ ನೇಕಾರರಿರುತ್ತಾರೆ.<br>1. 2019-20ನೇ ಸಾಲಿನ 4ನೇ ರಾಷ್ಟ್ರೀಯ ಕೈಮಗ್ಗ ಗಣತಿ ಪ್ರಕಾರ ರಾಜ್ಯದಲ್ಲಿ 54.250 ನೊಂದಾಯಿತ ಕೈಮಗ್ಗ ನೇಕಾರರು ಇರುತ್ತಾರೆ.<br>2. ವಿದ್ಯುತ್ ಮಗ್ಗ-1,02,980 ನೇಕಾರರು.<br>"ನೇಕಾರ ಸಮ್ಮಾನ್" ಯೋಜನೆಯಡಿ 80653 ವಿದ್ಯುತ್ ಮಗ್ಗ ನೇಕಾರರು ಹಾಗೂ ಕಾರ್ಮಿಕರಿಗೆ ಪ್ರಸಕ್ತ ಸಾಲಿನಲ್ಲಿ ರೂ.4032.65 ಲಕ್ಷಗಳ ಸಹಾಯಧನವನ್ನು ಬಿಡುಗಡೆ ಮಾಡಲಾಗಿದೆ. ಬಿಡುಗಡೆ ಮಾಡಿರುವ ಸಹಾಯಧನ ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| (ಆ) | ನೇಕಾರರು ತಮ್ಮ ಉತ್ಪನ್ನಗಳನ್ನು ರಫ್ತು ಮಾಡಲು ಮತ್ತು ಇವರ ವ್ಯಾಪಾರ-ವಹಿವಾಟನ್ನು ಉತ್ತೇಜಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಕಳೆದ ಮೂರು ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿರುವ ನೊಂದಾಯಿತ ನೇಕಾರರು ಎಷ್ಟು ಮೊತ್ತದ ಉತ್ಪನ್ನಗಳನ್ನು ಮಾರಾಟ ಮಾಡಿದ್ದಾರೆ; (ವಿವರ ನೀಡುವುದು) | ನೇಕಾರರನ್ನು ಸಂಘಟಿಸಿ ಅವರ ಉತ್ಪಾದಕತೆಯನ್ನು ಹೆಚ್ಚಿಸುವುದಲ್ಲದೇ ಅವರ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ಅಮೃತ ನೇಕಾರರ ಉತ್ಪಾದಕರ ಸಂಸ್ಥೆಗಳನ್ನು ರಚಿಸಿ ಅನುಷ್ಠಾನಗೊಳಿಸಲಾಗುತ್ತಿದೆ.<br>ಕೈಮಗ್ಗ ನೇಕಾರರ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯಗಳನ್ನು ಒದಗಿಸಲು ರಾಷ್ಟ್ರೀಯ ಕೈಮಗ್ಗ ಮೇಳ(ಎನ್.ಹೆಚ್.ಇ) ರಾಜ್ಯ ಕೈಮಗ್ಗ ಮೇಳ(ಎಸ್.ಹೆಚ್.ಇ) ಹಾಗೂ ಜಿಲ್ಲಾ ಮಟ್ಟದ ಕೈಮಗ್ಗ ಮೇಳ (ಡಿ.ಎಲ್.ಇ)ಗಳ ಆಯೋಜನೆಯ ಮೂಲಕ ನೇಕಾರರ ಉತ್ಪನ್ನಗಳಿಗೆ ವ್ಯಾಪಾರ-ವಹಿವಾಟನ್ನು ಉತ್ತೇಜಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>ನೇಕಾರರಿಗೆ ಮಾರುಕಟ್ಟೆಯನ್ನು ಒದಗಿಸಿಕೊಡುವ ನಿಟ್ಟಿನಲ್ಲಿ ನೇಕಾರರ ಉತ್ಪನಗಳಿಗೆ ಇ-ಮಾರುಕಟ್ಟೆ ವ್ಯವಸ್ಥೆ ಜಾರಿಗೊಳಿಸಲು ಕ್ರಮಕೈಗೊಳ್ಳುತ್ತಿದೆ.<br>ಕಳೆದ ಮೂರು ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿರುವ ನೊಂದಾಯಿತ ಕೈಮಗ್ಗ ನೇಕಾರರು ಉತ್ಪನ್ನಗಳನ್ನು ಮಾರಾಟ ಮಾಡಿದ ವಿವರ ಈ ಕೆಳಗಿನಂತಿದೆ:-<br>(ರೂ.ಲಕ್ಷಗಳಲ್ಲಿ)<br>2019-20: 2344.62; 2020-21: 2155.25; 2021-22: 2250.00 |

| | | |
|---|---|---|
| (ಇ) | ರಾಜ್ಯದ ಯಾವ ಯಾವ ತಾಲ್ಲೂಕುಗಳಲ್ಲಿ ಮಿನಿ ಜವಳಿ ಪಾರ್ಕ್ ಗಳನ್ನು ಸ್ಥಾಪಿಸಲು ಸರ್ಕಾರವು ಉದ್ದೇಶಿಸಲಾಗಿದೆ; ಈ ಪಾರ್ಕ್ ಗಳನ್ನು ಸ್ಥಾಪಿಸಲು ನಿಗಧಿಪಡಿಸಿದ ಅನುದಾನವೆಷ್ಟು? (ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದ ತಾಲ್ಲೂಕುಗಳಲ್ಲಿ ಮಿನಿ ಜವಳಿ ಪಾರ್ಕಗಳನ್ನು ಸ್ಥಾಪಿಸುವ ಕುರಿತು ಪ್ರಸ್ತಾವನೆಗಳು ಇಲಾಖೆಯಲ್ಲಿ ಸ್ವೀಕೃತವಾಗಿರುವುದಿಲ್ಲ. ಆದಾಗ್ಯೂ, ರಾಣೇಬೆನ್ನೂರು, ನವಲಗುಂದ, ಗುಳೇದಗುಡ್ಡ, ಕಾರ್ಕಳ, ರಾಯಚೂರು ಈ ತಾಲ್ಲೂಕುಗಳಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವ (PPP) ಮಾದರಿಯಲ್ಲಿ ಪಾರ್ಕ್ ಸ್ಥಾಪಿಸಲು ಉದ್ದೇಶಿಸಲಾಗಿದೆ. |

ಸಂಖ್ಯೆ: CI 24 JAKE 2023

(ಶಂಕರ ಬ. ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು

ಅನುಬಂಧ

ಕರ್ನಾಟಕ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಎಸ್ ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 602 ಕ್ಕೆ ಮಾಹಿತಿ ಒದಗಿಸುವ ಕುರಿತು

2022-23 ನೇ ಸಾಲಿನ ನೇಕಾರ ಸಮ್ಮಾನ್ (ವಿದ್ಯುತ್ ಮಗ್ಗ) ಯೋಜನೆಯಡಿ ಬಿಡುಗಡೆ ಮಾಡಲಾದ ಸಹಾಯಧನದ ಜಿಲ್ಲಾವಾರು ವಿವರ (ರೂ.ಲಕ್ಷಗಳಲ್ಲಿ) (ದಿ: 13.02.2023 ರ ಅಂತ್ಯಕ್ಕೆ)

| ಕ್ರ.ಸಂ | ಜಿಲ್ಲೆ | ಫಲಾನುಭವಿಗಳ ಸಂಖ್ಯೆ | ಡಿ.ಬಿ.ಟಿ ಮಾಡಲಾದ ಮೊತ್ತ |
|---|---|---|---|
| 1 | ಬಾಗಲಕೋಟೆ | 17449 | 872.45 |
| 2 | ಬಳ್ಳಾರಿ | 0 | 0.00 |
| 3 | ಬೆಳಗಾವಿ | 18401 | 920.05 |
| 4 | ಬೆಂಗಳೂರು ಗ್ರಾಮಾಂತರ | 11430 | 571.50 |
| 5 | ಬೆಂಗಳೂರು ನಗರ | 14033 | 701.65 |
| 6 | ಬೀದರ್ | 1 | 0.05 |
| 7 | ಚಾಮರಾಜನಗರ | 465 | 23.25 |
| 8 | ಚಿಕ್ಕಬಳ್ಳಾಪುರ | 2343 | 117.15 |
| 9 | ಚಿಕ್ಕಮಗಳೂರು | 0 | 0.00 |
| 10 | ಚಿತ್ರದುರ್ಗ | 86 | 4.30 |
| 11 | ದಕ್ಷಿಣ ಕನ್ನಡ | 0 | 0.00 |
| 12 | ದಾವಣಗೆರೆ | 63 | 3.15 |
| 13 | ಧಾರವಾಡ | 358 | 17.90 |
| 14 | ಗದಗ | 3336 | 166.80 |
| 15 | ಹಾಸನ | 626 | 31.30 |
| 16 | ಹಾವೇರಿ | 512 | 25.60 |
| 17 | ಕಲಬುರಗಿ | 16 | 0.80 |
| 18 | ಕೊಡಗು | 12 | 0.60 |
| 19 | ಕೋಲಾರ | 434 | 21.70 |
| 20 | ಕೊಪ್ಪಳ | 1372 | 68.60 |
| 21 | ಮಂಡ್ಯ | 582 | 29.10 |
| 22 | ಮೈಸೂರು | 86 | 4.30 |
| 23 | ರಾಯಚೂರು | 0 | 0.00 |
| 24 | ರಾಮನಗರ | 4675 | 233.75 |
| 25 | ಶಿವಮೊಗ್ಗ | 33 | 1.65 |
| 26 | ತುಮಕೂರು | 4307 | 215.35 |

| ಕ್ರ.ಸಂ | ಜಿಲ್ಲೆ | ಫಲಾನುಭವಿಗಳ ಸಂಖ್ಯೆ | ಡಿ.ಬಿ.ಟಿ ಮಾಡಲಾದ ಮೊತ್ತ |
|---|---|---|---|
| 27 | ಉಡುಪಿ | 0 | 0.00 |
| 28 | ಉತ್ತರ ಕನ್ನಡ | 11 | 0.55 |
| 29 | ವಿಜಯಪುರ | 22 | 1.10 |
| 30 | ಯಾದಗಿರಿ | 0 | 0.00 |
| | ಒಟ್ಟು | 80653 | 4032.65 |

ಷರಾ: 2022-23 ರಲ್ಲಿ ಅನುಮೋದಿತ 1,02,980 ವಿದ್ಯುತ್ ಮಗ್ಗ / ಮಗ್ಗಪೂರ್ವ ಚಟುವಟಿಕೆಗಳಲ್ಲಿ ತೊಡಗಿರುವ ನೇಕಾರ ಫಲಾನುಭವಿಗಳಲ್ಲಿ ದಿ: 13.02.2023 ರ ಅಂತ್ಯಕ್ಕೆ 80,653 ಫಲಾನುಭವಿಗಳಿಗೆ ತಲಾ ರೂ.5,000/- ಗಳಂತೆ ಒಟ್ಟು ರೂ.4032.65 ಲಕ್ಷಗಳನ್ನು ಡಿ.ಬಿ.ಟಿ ಮೂಲಕ ವರ್ಗಾಯಿಸಲಾಗಿರುತ್ತದೆ. ಆಧಾರ್ ಹಾಗೂ ಇತರೆ ತಾಂತ್ರಿಕ ಕಾರಣಗಳಿಂದ ಐ.ಡಿ ವ್ಯಾಲಿಡೇಟ್ ಆಗದ ಫಲಾನುಭವಿಗಳ ವಿವರಗಳನ್ನು ಅಪ್‌ಡೇಟ್ ಮಾಡಿಸಲು ಕ್ರಮವಹಿಸಲಾಗುತ್ತಿದೆ.

ಜಂಟಿ ನಿರ್ದೇಶಕರು,
ಕೈಮಗ್ಗ ಮತ್ತು ಜವಳಿ